# ಯೋಗಪ್ರದಾತೆ ಶ್ರೀಮಾತೆ

ಮಾತಾ ತ್ಯಾಗಮಯೀ

ಶ್ರೀಮಾತೆ ಶಾರದಾದೇವಿಯವರು ಅವತಾರ ವರಿಷ್ಠರಾದ ಶ್ರೀರಾಮಕೃಷ್ಣರಿಂದ ಪೂಜಿಸಲ್ಪಟ್ಟವರು; ಅನೇಕ ಮಂದಿ ಸಾಧು, ಸಂತರಿಗೆ ದಿವ್ಯಮಾರ್ಗವನ್ನು ತೋರಿಸಿಕೊಟ್ಟವರು. ದೇವದೇವತೆಗಳಿಗೂ, ಮಹಾನ್ ಋಷಿಗಳಿಗೂ, ಯೋಗಿಗಳಿಗೂ ಅಲಭ್ಯವಾದ ಮುಕ್ತಿಯೆಂಬುದು ಅವರ ಪಾಲಿಗೆ 'ಅಂಗೈ ಮೇಲಿನ ನೆಲ್ಲಿಕಾಯಿ'ಯಂತಿತ್ತು. ಅವರ ಈ ದಿವ್ಯ ವ್ಯಕ್ತಿತ್ವವನ್ನು ಕುರಿತು ವಿವರಿಸಿರುವ ಲೇಖಕಿ ಚಳ್ಳಕೆರೆ ಶ್ರೀ ಶಾರದಾಶ್ರಮದ ಮುಖ್ಯಸ್ಥರು. ಉತ್ತಮ ಬರಹಗಾರರೂ, ಅನುವಾದಕರೂ, ವಾಗ್ಮಿಯೂ ಆಗಿರುವ ಅವರು ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರನ್ನು ಕುರಿತು, ''ಅವರು ಅನಂತ ಬಗೆಯಲ್ಲಿ ಅಭಿವ್ಯಕ್ತಿಗೊಳ್ಳುವ ಸಾಧ್ಯತೆಗಳನ್ನೊಳಗೊಂಡ ಅನಂತ ಆಧ್ಯಾತ್ಮಿಕ ಭಾವಗಳ ಮೂರ್ತರೂಪ'' ಎಂದಿದ್ದಾರೆ. ''ನಾವು ಬ್ರಹ್ಮಜ್ಞಾನಕ್ಕೂ ಒಂದು ಮಿತಿಯನ್ನು ಕಲ್ಪಿಸಬಹುದೇನೋ. ಆದರೆ ಶ್ರೀರಾಮಕೃಷ್ಣರ ಮನಸ್ಸಿನ ಆಳ ಔನ್ನತ್ಯಗಳಿಗಲ್ಲ.'' ಶ್ರೀರಾಮಕೃಷ್ಣರ ಕುರಿತಾಗಿ ಹೇಳುವ ಮಾತನ್ನು ಶ್ರೀಮಾತೆಯವರ ಕುರಿತಾಗಿಯೂ ಹೇಳಬಹುದು. ಏಕೆಂದರೆ ಅವರಿಬ್ಬರೂ ಯಥಾಗ್ನೇರ್ದಾಹಿಕಾ ಶಕ್ತಿ – ಅಗ್ನಿ ಮತ್ತು ಅದರ ಸುಡುವ ಶಕ್ತಿಯಂತೆ, ವಜ್ರ ಮತ್ತು ಅದರ ಪ್ರಭೆಯಂತೆ, ಹಾಲು ಮತ್ತು ಅದರ ಬಿಳುಪಿನಂತೆ ಅಭಿನ್ನರು. ಸರ್ವವಿದ್ಯಾಸ್ವರೂಪಿಣಿಯಾದ ಶ್ರೀಮಾತೆಯವರ ಜೀವನಗಂಗೆಯಲ್ಲಿ ಇಂದು ನಾವು ಆಲೋಚಿಸ ಹೊರಟ ಒಂದು ಬೃಹತ್ ಅಲೆ 'ಯೋಗೀಂದ್ರಾರ್ಚಿತೆ ಯೋಗಪ್ರದಾತೆ.'

ಶ್ರೀಮಾತೆಯವರು ಶಿಷ್ಯ ಯೋಗೀಂದ್ರ– ಸ್ವಾಮಿ ಯೋಗಾನಂದರಿಂದ ಅರ್ಚಿಸಲ್ಪಟ್ಟವರು, ನೇಮಿಸಲ್ಪಟ್ಟವರು. ಅಥವಾ ಯೋಗೀಂದ್ರರು ಎಂದರೆ ಯೋಗ ಜನಶ್ರೇಷ್ಠರಿಂದ ಅರ್ಚಿಸಲ್ಪಟ್ಟವರು, ಪೂಜಿಸಲ್ಪಟ್ಟವರು, ಸೇವಿಸಲ್ಪಟ್ಟವರು. ಯೋಗಿ ಎಂದು ಹೇಳಿದಾಗ, ಮುನಿ, ಸಂತ, ಋಷಿ ಎಂದು ಹೇಳಿದಾಗ ಪಾವಿತ್ರ್ಯ, ಸಂಯಮ, ತಪಸ್ಸಿನ ಬಲದಿಂದ ಉನ್ನತ ಮನೋಭೂಮಿಕೆಯಲ್ಲಿ – ಅತ್ಯುನ್ನತ ಶಾಂತಿಯಲ್ಲಿ ನೆಲೆ ನಿಂತ ವ್ಯಕ್ತಿ ಎಂದರ್ಥ. ಶ್ರೀಮಾತೆಯವರು ಸ್ವಯಂ ಯೋಗಿಶ್ರೇಷ್ಠರು, ಯೋಗಾರೂಢರು, ಯೋಗಪ್ರತಿಷ್ಠಿತರು ಹಾಗೂ ಅದನ್ನು – ಯೋಗಭೂಮಿಕೆಯನ್ನು ಇತರರಿಗೆ ಅನುಗ್ರಹಿಸುವಷ್ಟು ಸಕ್ಷಮರಾಗಿದ್ದರು. ಯೋಗಪ್ರದಾತೆ ಎಂದು ಹೇಳಿದಾಗ ಜೀವ– ಬ್ರಹ್ಮ ಏಕತ್ವವನ್ನು ಅನುಗ್ರಹಿಸುವವಳು, ಭಗವನ್ಮಾರ್ಗದಲ್ಲಿ ಗುರಿ ಸೇರಿಸುವವಳು ಎಂದರ್ಥ. ಹಾಗೆ ನೋಡಿದರೆ ಶ್ರೀಮಾತೆಯವರೇ ನುಡಿದಂತೆ, ''ಶ್ರೀರಾಮಕೃಷ್ಣರು ನನ್ನ ಬಳಿ ಇರುವೆಗಳ ಸಾಲನ್ನೇ ನೂಕಿಬಿಟ್ಟಿದ್ದಾರೆ'', ಶ್ರೀಮಾತೆಯವರು ಅಸಂಖ್ಯ ದೀನ, ದುಃಖಿ, ದುರ್ಬಲರನ್ನು, ಪಾಪಿ ತಾಪಿ ಪತಿತರನ್ನು ಉದ್ಧರಿಸಿದವರು. ಹಾಗೆಂದು ಅವರು ಸಣ್ಣವರ ಗುರುಗಳಾಗಿ, ಸಣ್ಣವರಾಗಿ ಉಳಿಯಲಿಲ್ಲ, ದೊಡ್ಡವರಾದ ಯೋಗಿಗಳ ನಿತ್ಯಸಿದ್ಧರ,



ಸಂತ ಸಂನ್ಯಾಸಿಗಳ, ಈಶ್ವರಕೋಟಿಗಳೆನಿಸಿಕೊಂಡವರ ಗುರುಗಳೂ ಹೌದು.

ಶ್ರೀಮಾತೆಯವರು ಅವತಾರವರಿಷ್ಠರಾದ, ಲೋಕಗುರು, ಯೋಗೀಂದ್ರ ಶ್ರೀರಾಮಕೃಷ್ಣರಿಂದಲೇ ಅರ್ಚಿತರು. ೧೮೭೩ ಜೂನ್ ೫, ವೈಶಾಖ ಬಹುಳ ಅಮಾವಾಸ್ಯೆಯ ಫಲಹಾರಿಣೀ ಕಾಳೀಪೂಜೆಯ ದಟ್ಟ ರಜನಿಯಲ್ಲಿ ದಕ್ಷಿಣೇಶ್ವರ ದೇವನಿಲಯದ ಗಂಭೀರ ಆವರಣದಲ್ಲಿ ಶ್ರೀರಾಮಕೃಷ್ಣರು ಶ್ರೀಮಾತೆಯವರಿಗೆ ಷೋಡಶೀ ಪೂಜೆಯನ್ನು ಸಲ್ಲಿಸಿ ೧೨ ವರ್ಷಗಳ ತಮ್ಮ ಸಮಸ್ತ

ಸಾಧನೆಗಳ ಫಲವನ್ನು ಪದತಲದಲ್ಲಿ ಅರ್ಪಿಸಿದರು. ಶ್ರೀಮಾತೆಯವರು ಅದನ್ನು ಘನತೆಯಿಂದ ಸ್ವೀಕರಿಸಿದರು. ಪೂಜ್ಯ-ಪೂಜಕರಿಬ್ಬರೂ ಇಂದ್ರಿಯ ರಾಜ್ಯವನ್ನು ಅತಿಕ್ರಮಿಸಿ ಆತ್ಮ ಭಾವದಲ್ಲಿ ಏಕೀಭವಿಸಿದರು, ಗಾಢ ಸಮಾಧಿಸ್ಥರಾದರು, ಅವರು ಯೋಗೀಂದ್ರಾರ್ಚಿತೆ.

ಶ್ರೀಮಾತೆಯವರು ಲೋಕವಂದ್ಯ ಸ್ವಾಮಿ ವಿವೇಕಾನಂದರಿಂದ ಅರ್ಚಿಸಲ್ಪಟ್ಟವರು. ಸ್ವಾಮೀಜಿ ಶ್ರೀಮಾತೆಯವರನ್ನು ಹೇಗೆ ಅರ್ಚಿಸಿದರು? ತಮ್ಮ ವಾಕ್ ಪುಷ್ಪಗಳಿಂದ. ಸ್ವಾಮೀಜಿ ಶ್ರೀಮಾತೆಯವರನ್ನು ಕುರಿತು ಎಂತಹ ಘನತರ ನುಡಿಗಳನ್ನು ಹೇಳಿದರು! ''ಸೋದರ, ನನ್ನ ಹೆಸರು ವಿವೇಕಾನಂದನೇ ಹೌದಾದಲ್ಲಿ, ನಾನು ನಿಮಗೆ ಜೀವಂತ ದುರ್ಗೆಯನ್ನು ಆರಾಧಿಸಿ ತೋರಿಸುತ್ತೇನೆ.''[೧] ಯಾವ ನರೇಂದ್ರ ಶ್ರೀರಾಮಕೃಷ್ಣರನ್ನು ಅವತಾರವೆಂದು ಒಪ್ಪಿ ಸ್ವೀಕರಿಸಲು ಅಷ್ಟೊಂದು ಗುದ್ದಾಡಿ ಹೋರಾಡಿದನೋ ಅದೇ ನರೇಂದ್ರ ಹೇಳುವ ಮಾತಿದು. ಸ್ವಾಮೀಜಿ ಇನ್ನೊಂದೆಡೆ, ''ಶ್ರೀಮಾತೆಯವರು ಬಗಲಾದೇವಿಯ ಅವತಾರ, ಆದರೆ ಸೌಮ್ಯ ಸರಸ್ವತಿಯ ರೂಪದಲ್ಲಿ ಆಗಮಿಸಿದ್ದಾರೆ.'' ಎಂದಿದ್ದಾರೆ.[೨] ಬಾಹ್ಯದಲ್ಲಿ ಅವರು ಶಾಂತ, ಮೌನ, ಸೌಮ್ಯ. ಅಂತರಂಗದಿಂದ ಅವರದು ಪ್ರಚಂಡ ಶಕ್ತಿ, ದುಷ್ಟಶಕ್ತಿವಿನಾಶಿನಿ. ಅಂತಹ ಲೋಕವಿಖ್ಯಾತ ಸ್ವಾಮೀಜಿ ಶ್ರೀಮಾತೆಯವರ ದರ್ಶನಕ್ಕೆ ಹೋಗಬೇಕಾದರೆ ಭಾವಪುಲಕಿತರಾಗುತ್ತಿದ್ದರು. ಅವರ ಶರೀರ ಕಂಪಿಸುತ್ತಿತ್ತು, ದೀರ್ಘದಂಡ ಪ್ರಣಾಮ ಮಾಡಿ ಪಾದಧೂಳಿಯನ್ನು ಸ್ವೀಕರಿಸುವಾಗ ಅವರು ಬಾಲಕನಂತಾಗುತ್ತಿದ್ದರು. ಅವರು ಯೋಗೀಂದ್ರಾರ್ಚಿತೆ.

ಶ್ರೀರಾಮಕೃಷ್ಣರ ಮಾನಸ ಪುತ್ರ ಸ್ವಾಮಿ ಬ್ರಹ್ಮಾನಂದರು – ಯಾರನ್ನು ಸ್ವಾಮಿ ವಿವೇಕಾನಂದರು 'ಆಧ್ಯಾತ್ಮಿಕ ಶಕ್ತಿಯ ಗಣಿ' ಎಂದು ಕರೆದಿದ್ದರೋ ಅಂತಹ ಸ್ವಾಮಿ ಬ್ರಹ್ಮಾನಂದರು ಶ್ರೀಮಾತೆಯವರನ್ನು ದುರ್ಗಾಪೂಜೆಯ ಪರ್ವದಿನದಂದು ೧೦೮ ಕಮಲಪುಷ್ಪಗಳಿಂದ ಪೂಜಿಸಿದರು.[೩] ಶ್ರೀಮಾತೆಯವರು ಒಂದು ಮಾತು ಹೇಳಿದರೆ ಸಾಕು, ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರು ಅದನ್ನು ಶಿರಸಾವಹಿಸಿ ಪಾಲಿಸುತ್ತಿದ್ದರು.

'ಯೋಗೀಂದ್ರಾರ್ಚಿತೆ ಯೋಗಪ್ರದಾತೆ'ಗೆ ಒಂದು ಹೃದಯಸ್ಪರ್ಶಿ ಉದಾಹರಣೆ ಸ್ವಾಮಿ ಅಭೇದಾನಂದರು ಹಾಗೂ ಶ್ರೀಮಾತೆಯವರ ಸಂಬಂಧ. ಸ್ವಾಮಿ ಅಭೇದಾನಂದರು ಶ್ರೀಶಾರದಾದೇವೀ ಸ್ತೋತ್ರವನ್ನು ಶ್ರೀಮಾತೆಯವರ ಸನ್ನಿಧಾನದಲ್ಲಿ ಪಠಿಸಿದ ಸಂದರ್ಭ. ಶ್ರೀಮಾತೆಯವರು ಆಗ ನೀಲಾಂಬರ ಬಾಬುಗಳ ತೋಟದ ಮನೆಯಲ್ಲಿ ವಾಸವಾಗಿದ್ದರು. ಒಂದು ದಿನ ಸ್ವಾಮಿ ಅಭೇದಾನಂದರು ಶ್ರೀಮಾತೆಯವರನ್ನು ದರ್ಶಿಸಿ ತಾವು ಒಂದು ಸ್ತೋತ್ರವನ್ನು ರಚಿಸಿರುವುದಾಗಿ, ಅದನ್ನು ಅವರ ಸನ್ನಿಧಿಯಲ್ಲಿ ಪಠಿಸುವುದಾಗಿ ಕೇಳಿಕೊಂಡರು. ಶ್ರೀಮಾತೆಯವರು, ''ಶ್ಲೋಕ? ಯಾರ ಕುರಿತಾಗಿ?'' ಎಂದು ಕೇಳಿದರು. ''ತಮ್ಮ ಕುರಿತಾಗಿ'', ಎಂದರು ಅಭೇದಾನಂದರು.

ಶ್ರೀಮಾತೆ: ''ಮಗು, ನನ್ನ ಕುರಿತಾಗಿ ಬರೆಯುವಂಥದ್ದೇನಿದೆ?'' ಶ್ರೀಮಾತೆಯವರು ಅನ್ಯಮನಸ್ಕರಾಗಿದ್ದಂತೆ ಕಂಡಿತು. ಸ್ವಾಮಿ ಅಭೇದಾನಂದರು ಇನ್ನೊಮ್ಮೆ ವಿನಂತಿಸಿದಾಗ ಶ್ರೀಮಾತೆಯವರು ಒಪ್ಪಿದರು.

ಸ್ವಾಮಿ ಅಭೇದಾನಂದರು ಪಠಿಸತೊಡಗಿದರು:

**ಪ್ರಕೃತಿಂ ಪರಮಾಂ ಅಭಯಾಂ ವರದಾಂ**
**ನರರೂಪಧರಾಂ ಜನತಾಪಹರಾಂ ..**

ಒಂದೊಂದು ಶಬ್ದದ ಭಾವಕ್ಕೆ ತಕ್ಕಂತೆ ಶ್ರೀಮಾತೆಯವರ ಮುಖಭಾವ ಗಂಭೀರವಾಗತೊಡಗಿತು. ಕೊನೆಗೆ ''**ರಾಮಕೃಷ್ಣ ಗತಪ್ರಾಣಾಂ**''– ಶ್ರೀರಾಮಕೃಷ್ಣರಲ್ಲಿ ನಿಮ್ಮ ಪ್ರಾಣ ನೆಲೆಸಿದೆ ಎಂದು ಹೇಳಿದಾಗ ಅವರ ಶರೀರ ಸ್ಥಿರವಾಯಿತು. '**ತನ್ನಾಮ ಶ್ರವಣಪ್ರಿಯಾಮ್**' – ಅವರ ನಾಮವನ್ನು ಆಲಿಸುವುದರಲ್ಲಿ ಪ್ರೀತಿಯುಳ್ಳವಳು – ಎಂದು ಉಚ್ಚರಿಸಿದಾಗ ಅವರ ಕಣ್ಣಂಚಿನಿಂದ ಪ್ರೇಮಾಶ್ರುಗಳು ಉರುಳತೊಡಗಿದವು. '**ತದ್ಭಾವ ರಂಜಿತಾಕಾರಾಂ**' – ಎಂದು ಹೇಳುತ್ತಲೇ ಅಲ್ಲಿ ಶೀಮಾತೆಯವರೇ ಇರಲಿಲ್ಲ, ಶ್ರೀರಾಮಕೃಷ್ಣರೇ ಕುಳಿತಿದ್ದರು. ಶ್ರೀಮಾತೆಯವರೂ ಸಮಾಧಿಸ್ಥರಾದರು, ಸ್ವಾಮಿ ಅಭೇದಾನಂದರೂ ಸಮಾಧಿಸ್ಥರಾದರು.

ಒಂದು ಸಲ ಗಿರೀಶ ಚಂದ್ರ ಘೋಷರ ನಾಟಕ ಕಂಪೆನಿಯ ನಟಿ ತೀನ್‌ಕಾರಿ ಶ್ರೀಮಾತೆಯವರ ದರ್ಶನಕ್ಕೆ ಬಂದಿದ್ದಳು. ಲಕ್ಷ್ಮಿ ಅವಳಿಗೆ ಒಂದು ಭಜನೆ ಹೇಳುವಂತೆ ಕೇಳಿಕೊಂಡಳು. ಅವಳು ಹಿಂಜರಿಯುತ್ತ, ''ನಾನು ಯಾವ ಬಗೆಯ ಹಾಡನ್ನು ಹೇಳಲಿ?'' ಎಂದು ಕೇಳಿದಳು. ಶ್ರೀಮಾತೆಯವರು, ''ನೀನು ಬಿಲ್ವಮಂಗಲ ನಾಟಕದಲ್ಲಿ ಹುಚ್ಚಿಯ ಪಾತ್ರದಲ್ಲಿ ಹಾಡಿದ ಹಾಡನ್ನು ಹೇಳಿದರೆ ಅದ್ಭುತವಾಗಿರುತ್ತದೆ'', ಎಂದರು. ತೀನ್‌ಕಾರಿ ಆ ಪಾತ್ರವನ್ನು ಅಭಿನಯಿಸಿ ಹಾಡಲಾರಂಭಿಸಿದಳು. ಆಗ ಬೆಳಿಗ್ಗೆ ೯-೩೦ ಗಂಟೆ, ತೀನ್‌ಕಾರಿಯು ಮಧುರ, ಗಂಭೀರ, ಭಾವಪೂರ್ಣ ಧ್ವನಿಯಲ್ಲಿ ''ಕೃಷ್ಣ, ಪ್ರಿಯತಮ, ನನ್ನ ಕೈಹಿಡಿದು ಸಂಚರಿಸುತಿಹನು'' ಎಂದು ಹಾಡುತ್ತಲೇ ಎಲ್ಲರೂ ಕೆಲಸ ನಿಲ್ಲಿಸಿದರು. ಸ್ವಾಮಿ ಶಾರದಾನಂದರು ಬರೆಯುತ್ತಿದ್ದವರು, ಲೇಖನಿಯನ್ನು ಕೆಳಗಿರಿಸಿ ಭಜನೆಯ ಭಾವದಲ್ಲಿ ಲೀನರಾದರು. ಅಡುಗೆ ಮಾಡುತ್ತಿದ್ದವರು, ಸೇವಕರು ತಮ್ಮ ತಮ್ಮ ಕೆಲಸಗಳನ್ನು ನಿಲ್ಲಿಸಿ ಅಲ್ಲಿಯೇ ಸ್ಥಿರವಾಗಿ ಕುಳಿತುಬಿಟ್ಟರು.

---

೧ ಶ್ರೀಶಾರದಾದೇವಿ ಜೀವನಗಂಗಾ, ಸ್ವಾಮಿ ಪುರುಷೋತ್ತಮಾನಂದ, ಪು. ೯
೨ Reminiscences of Sri Sarada Devi, ಪು. ೯
೩ ಶ್ರೀಶಾರದಾದೇವೀ ಜೀವನಗಂಗಾ, ಪು.೩೬೨

ಶ್ರೀಮಾತೆಯವರು ಪೂಜೆ ಮುಗಿಸಿ ನೆಲದ ಮೇಲೆ ಆಸನದಲ್ಲಿ ಕುಳಿತಿದ್ದರು. ಅವರು ಹಾಡಿನಲ್ಲಿ ತಲ್ಲೀನರಾಗಿದ್ದರು. ತೀನ್‌ಕಾರಿ 'ಉದ್ಬೋಧನ'ದಲ್ಲಿ ಶ್ರೀರಾಮಕೃಷ್ಣರ ಗರ್ಭಗೃಹದ ಎದುರಿನ ವರಾಂಡದಲ್ಲಿ ಕುಳಿತು ಹಾಡುತ್ತಿದ್ದಳು. ಶ್ರೀಮಾತೆಯವರು ಕಣ್ಣು ಮುಚ್ಚಿಕೊಂಡು ಕೇಳುತ್ತಿದ್ದಾರೆ. ಸ್ವಲ್ಪ ಹೊತ್ತಿನಲ್ಲಿ ಕಣ್ಣು ತೆರೆದರೂ ದೃಷ್ಟಿ ಅಂತರ್ಮುಖವಾಗಿತ್ತು. ಇಡೀ 'ಉದ್ಬೋಧನ' ನಿಶ್ಶಬ್ದವಾಯಿತು. ಪ್ರತಿಯೊಬ್ಬರ ಭಾವ ಜಾಗೃತವಾಯಿತು, ತೀನ್‌ಕಾರಿ ಹಾಡು ಮುಗಿಸಿದರೂ ಶ್ರೀಮಾತೆಯವರು ಭಾವಾವಸ್ಥೆಯಲ್ಲಿಯೇ, 'ಆಹಾ, ಆಹಾ' ಎಂದು ಉದ್ಗರಿಸಿದರು.[೪] ಮಾತು ಮೌನವಾಯಿತು, ಸಾಂತ ಅನಂತವಾಯಿತು, ಅಲ್ಪ ಭೂಮವಾಯಿತು.

**ಯಥಾ ನದ್ಯಃ ಸ್ಯಂದಮಾನಾಃ**
**ಸಮುದ್ರೇಽಸ್ತಂ ಗಚ್ಛಂತಿ ನಾಮರೂಪೇ ವಿಹಾಯ।**
**ತಥಾ ವಿದ್ವಾನ್ ನಾಮರೂಪಾದ್ವಿಮುಕ್ತಃ**
**ಪರಾತ್ಪರಂ ಪುರುಷಮುಪೈತಿ ದಿವ್ಯಂ ॥** *(ಮುಂಡಕ, ೩.೨.೮)*

'ಹರಿಯುವ ನದಿಗಳು ಹೇಗೆ ನಾಮರೂಪಗಳನ್ನು ತೊರೆದು ಸಮುದ್ರದಲ್ಲಿ ಲೀನವಾಗುವವೋ ಹಾಗೆ ವಿದ್ವಾಂಸನು ನಾಮರೂಪಗಳಿಂದ ಬಿಡುಗಡೆ ಹೊಂದಿ, ಪರಾತ್ಪರನೂ ದಿವ್ಯನೂ ಆದ ಪುರುಷನನ್ನು ಹೊಂದುವನು.' ಶ್ರೀಮಾತೆಯವರ ಜೀವನದಲ್ಲಿ ಇಂತಹ ಘಟನೆಗಳು ಹತ್ತು ಹಲವು.

ಶ್ರೀಮಾತೆಯವರು ಇಚ್ಛಾಮಾತ್ರದಿಂದ, ದೃಷ್ಟಿಮಾತ್ರದಿಂದ ಇತರರಲ್ಲಿ ಆತ್ಮಜಾಗೃತಿಯನ್ನುಂಟುಮಾಡಬಲ್ಲವರಾಗಿದ್ದರೂ ಹೆಚ್ಚಿನ ಸಂದರ್ಭಗಳಲ್ಲಿ, ಹೆಚ್ಚಿನ ಜನಗಳ ವಿಷಯದಲ್ಲಿ ಅವರು ಇದನ್ನು ಮಂತ್ರದೀಕ್ಷೆಯ ಮೂಲಕ ಮಾಡಿದರು. ಸ್ವಾಮಿ ಅಶೇಷಾನಂದರಿಗೆ ಶ್ರೀಮಾತೆಯವರು ಮಂತ್ರ ನೀಡಿದ್ದರು. ಶ್ರೀಮಾತೆಯವರ ಮಹಾಸಮಾಧಿಯ ನಂತರ ಅವರು ಸ್ವಾಮಿ ಶಾರದಾನಂದರ ಸಹಾಯಕ ಸ್ವಾಮಿಯಾಗಿದ್ದರು. ಸ್ವಾಮಿ ಶಾರದಾನಂದರು ದೀಕ್ಷೆ ನೀಡುವಾಗ ಹಲವಾರು ನಿಯಮ ನಿರ್ದೇಶನಗಳನ್ನು ಅನುಸರಿಸುವುದನ್ನು ನೋಡಿ, ಸ್ವಾಮಿ ಅಶೇಷಾನಂದರು, ''ಮಹಾರಾಜ್, ಶ್ರೀಮಾತೆಯವರು ನನಗೆ ದೀಕ್ಷೆಯನ್ನೇನೋ ನೀಡಿದ್ದಾರೆ. ಆದರೆ ಅವರು ಬೆಳಗ್ಗೆ ಸಂಜೆ ಇಂತಿಷ್ಟು ಜಪ ಮಾಡಬೇಕು, ವಿಶೇಷ ದಿನಗಳಲ್ಲಿ ಹೇಗೆ ಜಪ ಮಾಡಬೇಕು ಎಂದೆಲ್ಲ ಹೇಳಲೇ ಇಲ್ಲ. ತಾವು ನನಗೆ ದಯವಿಟ್ಟು ಈ ಕ್ರಮ ನಿಯಮಗಳನ್ನು ಕಲಿಸಿಕೊಡಿ'' ಎಂದು ವಿನಂತಿಸಿದರು. ಸ್ವಾಮಿ ಶಾರದಾನಂದರು, ''ಮೂರ್ಖ, ಶ್ರೀಮಾತೆಯವರು ನಿನಗೆ ನೀಡುವ ದೀಕ್ಷೆಗೆ ನಾನು ಏನನ್ನಾದರೂ ಸೇರಿಸಬೇಕೆಂದು ನೀನು ಹೇಳುತ್ತಿಯೇನು? ಶ್ರೀಮಾತೆಯವರು ಸಿದ್ಧಗುರು. ಈ ಎಲ್ಲ ವಿಧಿವಿಧಾನಗಳು, ಕ್ರಮಗಳು ಇತರ ಗುರುಗಳಿಗೆ ಬೇಕು, ಶ್ರೀಮಾತೆಯವರಿಗಲ್ಲ. ಅವರ ಕೃಪೆಯಿಂದಲೇ ನಾನು ಇಲ್ಲಿ ಇದ್ದೇನೆ. ಶ್ರೀಮಾತೆಯವರು ನಿನಗೆ ಏನು ನೀಡಿದ್ದಾರೆಯೋ ಅದು ಆಧ್ಯಾತ್ಮಿಕ ಜೀವನದ ಅಂತಿಮ ಶಬ್ದ. ಆ ಮಂತ್ರವನ್ನು ಹಿಡಿದುಕೋ. ನಿನಗೆ ಇಷ್ಟಸಿದ್ಧಿಯಾಗುತ್ತದೆ'' ಎಂದರು.[೫]

ಯೋಗ ಶಬ್ದಕ್ಕೆ ಶ್ರೀಕೃಷ್ಣ ಭಗವದ್ಗೀತೆಯಲ್ಲಿ ನೀಡುವ ಪರಿಭಾಷೆ ಏನು? ''ಸಮತ್ವಂ ಯೋಗ ಉಚ್ಯತೇ'' – ಪ್ರಜ್ಞೆಯ ಸಮತ್ವವೇ ಯೋಗ. ಮನಸ್ಸು, ಬುದ್ಧಿಯ ಸಮತ್ವವೇ ಯೋಗ. ಮನಸ್ಸಿನ ಸಮತ್ವವನ್ನು ಸಾಧಿಸುವುದು ಅತ್ಯಂತ ಕಠಿಣ. ಮನಸ್ಸು ಹೇಗಿದೆ?

**ಪದರಪದರಗಳಿಹವು, ಗಂಟುಗಂಟುಗಳಿಹವು ।**
**ಹೃದಯದಲ್ಲಿ ಬುದ್ಧಿಯಲಿ ವಾಕ್ಚರ್ಯೆಗಳಲಿ ॥**

ಮನುಷ್ಯ ಸ್ವಭಾವದಲ್ಲಿ ಇಂತಹ ಮನಸ್ಸಿನ ಸಮತ್ವವನ್ನು ಸಾಧಿಸುವುದು ಸುಲಭವಾಗಿ ಹೋಯಿತೆ? ಮನಸ್ಸು ಹೇಗಿದೆ?

**ಅಂತರಂಗವನ್ನೆಲ್ಲ ಬಿಚ್ಚಿ ತೋರಿಪನಾರು ? ।**
**ಅಂತರಂಗಗಭೀರಗಳ ತಾನೆ ಕಂಡವನಾರು? ॥**
**ಗಂತಿಗಳು ಗಂಟುಗಳು ಮುಡಿಪುಮಡಿಪುಗಳಲ್ಲಿ ।**
**ಸ್ವಂತಕೇ ದುರ್ದರ್ಶ– ಮಂಕುತಿಮ್ಮ॥** *(ಕಗ್ಗ, ೯೯೪)*

ಇಂತಹ ಮನಸ್ಸಿನ ಸಮತ್ವ ಸುಲಭವಾಗಿ ಹೋಯಿತೆ? ಶ್ರೀರಾಮಕೃಷ್ಣರು ಹೇಳುವಂತೆ, ''ಮನಸ್ಸು ಹಸಿ ಕಡ್ಡಿಪೊಟ್ಟಣ'' ವಿದ್ದಂತೆ. ಎಷ್ಟೇ ಬೆಂಕಿಕಡ್ಡಿಯನ್ನು ಗೀರಿದರೂ ಬೆಂಕಿ ಹತ್ತಿಕೊಳ್ಳುವುದೇ ಇಲ್ಲ. ಇಂತಹ ಜನುಮ ಜನುಮ ಶತಕೋಟಿ ಸಂಸ್ಕಾರಗಳ ಮೂಟೆಯಾದ ಮನಸ್ಸಿಗೆ ಪರಮ ಚರಮ ಸಂಸ್ಕಾರವನ್ನು, ಸಂಸ್ಕರಣವನ್ನು ನೀಡುವ ಮನಸ್ಸಮತ್ವದ ಕಾರ್ಯವನ್ನು ಶ್ರೀಮಾತೆಯವರು ಎಷ್ಟು ಚೊಕ್ಕಟವಾಗಿ, ಮಾಡಿದ್ದಾರೆ! ಈ ಅರ್ಥದಲ್ಲಿಯೂ ಅವರು ಯೋಗಪ್ರದಾತೆ–ಮನಸ್ಸಮತ್ವರೂಪದ ಯೋಗವನ್ನು ಅನುಗ್ರಹಿಸುವವಳು. ಸ್ವಯಂ ಶ್ರೀಮಾತೆಯವರ ಮನಸ್ಸು ಎಷ್ಟು ಸಮವಾಗಿತ್ತು! ಯಾವ 'ಭಾವ ಮರ್ಮಂಗಳೇಳುವಾಗ ತಳದಿಂದ'ಲೂ ಅವರ ಸಮತ್ವದ ಸಂಯಮದ ಕಟ್ಟೆ ಬಿರುಕು ಬಿಡಲಿಲ್ಲ. ಸಾಮಾನ್ಯವಾಗಿ ನಾವು ಒಬ್ಬ ಸಂತನ ಹತ್ತಿರಹೋದಾಗ, ನಾವು ಅವನ ವಲಯದಲ್ಲಿರುವವರೆಗೆ ನಮ್ಮ ಕಾಮ–ಕ್ರೋಧಾದಿಗಳು ರಾಗದ್ವೇಷಾದಿಗಳು ಹೆಡೆಯೆತ್ತುವುದಿಲ್ಲ. ಓರ್ವ ಸಂತನ ವಿಷಯವೇ ಹೀಗಿರುವಾಗ ಶ್ರೀಮಾತೆಯವರ ವಿಷಯವನ್ನೇನು ಕೇಳುತ್ತೀರಿ? ಶ್ರೀಮಾತೆಯವರು ಬದುಕಿರುವಾಗ ಮಾತ್ರವಲ್ಲ ಇಂದಿಗೂ ಅವರ ಜೀವನ–ವಾಣಿಗಳ ಪರಿವೇಷದಲ್ಲಿರುವವರೆಗೆ ನಮ್ಮ ಮನಸ್ಸಿನಲ್ಲಿ ಕಾಮಕ್ರೋಧಾದಿಗಳ ಉಪಟಳವಿರುವುದಿಲ್ಲ.

ಸ್ವಾಮಿ ತಾರಕೇಶ್ವರಾನಂದರು ಓರ್ವ ಅದ್ಭುತ ಸಂನ್ಯಾಸಿ, ಮಹಾತ್ಮರು. ಅವರದು ಶಾಂತ, ಮೌನ, ಪರಮ ಸಹಿಷ್ಣು

೪ Sri Sarada Devi and Her Devine Play - Swami Chetananada, ಪು. ೫೮೨

೫ ಅಲ್ಲೇ, ಪು. ೪೬೭

ಜೀವನ. ಅವರು ವಿದ್ಯಾರ್ಥಿಯಾಗಿದ್ದಾಗ ಆಗಾಗ 'ಉದ್ಬೋಧನ'ಕ್ಕೆ ಹೋಗುತ್ತಿದ್ದರು. ಶ್ರೀಮಾತೆಯವರ ದರ್ಶನದಿಂದ ಅವರಿಗೆ ಶಾಂತಿ ಸಿಗುತ್ತಿತ್ತು. ಒಂದು ದಿನ ಅವರು ಶ್ರೀಮಾತೆಯವರ ಬಳಿಗೆ ಹೋಗಿ ನಮಿಸಿ, ''ಅಮ್ಮಾ, ನಾನು ಇನ್ನೊಮ್ಮೆ ನಿಮ್ಮ ಹತ್ತಿರ ಬರುವುದಿಲ್ಲ. ಇದೇ ನನ್ನ ಕೊನೆಯ ಭೇಟಿ. ನಾನು ನಿಮ್ಮ ಬಳಿ ಇರಲು ಯೋಗ್ಯನಲ್ಲ.'' ಎಂದರು. ''ಏಕೆ ಏನಾಯಿತು? ಮಗು?'' ಎಂದು ಶ್ರೀಮಾತೆಯವರು ಪ್ರಶ್ನಿಸಿದರು. ಅವರು, ''ಅಮ್ಮ, ಕಾಲೇಜಿನಲ್ಲಿ ದುಷ್ಟ ಯುವಕರ ಸಹವಾಸ. ನನ್ನ ಮನಸ್ಸಿನಲ್ಲಿ ಯಾವಾಗಲೂ ದುರ್ವಿಚಾರಗಳು ದಾಳಿ ಮಾಡುತ್ತಿರುತ್ತವೆ'', ಎನ್ನುತ್ತ ಶ್ರೀಮಾತೆಯವರಿಗೆ ನಮಸ್ಕರಿಸಿ ವೇಗವಾಗಿ ಹೆಜ್ಜೆಯಿಟ್ಟರು. ಶ್ರೀಮಾತೆಯವರೂ ಅವರನ್ನು ಹಿಂಬಾಲಿಸಿಕೊಂಡು ವೇಗವಾಗಿ ಹೋಗಿ, ಅವನ ಶರಟನ್ನು ಹಿಡಿದುಕೊಂಡರು. ಅವನನ್ನು ತಿರುಗಿಸಿ, ಭುಜಗಳೆರಡನ್ನೂ ಹಿಡಿದುಕೊಂಡು, ಅವನ ಕಣ್ಣುಗಳಲ್ಲಿ ಕಣ್ಣುಗಳನ್ನಿಟ್ಟು, ''ಮಗೂ, ದುರ್ವಿಚಾರಗಳು ಲಗ್ಗೆಯಿಟ್ಟಾಗ ನನ್ನನ್ನು ಸ್ಮರಿಸಿಕೋ'' ಎಂದರು. ಆ ಅದ್ಭುತವಾದ, ದಯಾರ್ದ್ರ ಕಣ್ಣುಗಳು ಅವರ ಅಂತರಾಳವನ್ನು ಪ್ರವೇಶಿಸಿ ಅಲ್ಲೇ ಮನೆ ಮಾಡಿದವು. ಕೆಲಕಾಲದಲ್ಲೇ ಅವರು ಬೇಲೂರು ಮಠ ಸೇರಿ ಸಂನ್ಯಾಸಿಯಾದರು. ಸ್ವಾಮಿ ತಾರಕೇಶ್ವರಾನಂದರು ಮಹಾನ್ ಸಂನ್ಯಾಸಿಯಾಗಿದ್ದರು. ಅವರು ಹೃಷೀಕೇಶದಲ್ಲಿ ಸ್ವರ್ಗಾಶ್ರಮದ ಹತ್ತಿರ ಸಂಚರಿಸುತ್ತಿರುವಾಗ ಒಬ್ಬ ಬೇಡ ಜಿಂಕೆಗೆ ಹೊಡೆದ ಬಾಣ ಅವರಿಗೆ ತಾಗಿತು.ಅವರಿಗೆ ಬೇಡನ ಹೆಸರು ಗೊತ್ತಿದ್ದರೂ ಅವರು ಪೋಲಿಸರಿಗೆ ಬೇಡನ ಹೆಸರನ್ನು ಹೇಳಲೇ ಇಲ್ಲ. ಎದೆಗೆ ಬಾಣ ತಾಗಿದ್ದರಿಂದ ಅವರಿಗೆ ಆಗಾಗ ಭಯಂಕರ ತಲೆಶೂಲೆ, ಭಯಂಕರ ಎದೆನೋವು ಬರುತ್ತಿತ್ತು. ಆದರೆ ಅವರು ಎಲ್ಲವನ್ನೂ ಸಹಿಸಿಕೊಂಡರು.[೬] ಶ್ರೀಮಾತೆಯವರ ಪರಮ ಕಷ್ಟಸಹಿಷ್ಣುತೆಯನ್ನು ಅವರು ಮೈಗೂಡಿಸಿಕೊಂಡಿದ್ದರು.

ಶ್ರೀಮಾತೆಯವರ ಹತ್ತಿರ ಶಿಷ್ಯ ರಾಸಬಿಹಾರಿ ಬ್ರಹ್ಮಚಾರಿಗಳು, ''ಅಮ್ಮ, ಶುದ್ಧ ಮನಸ್ಸು ಹೇಗೆ ಲಭಿಸುತ್ತದೆ?'' ಎಂದು ಕೇಳಿದರು. ಶ್ರೀಮಾತೆಯವರು, ''ಮಗೂ. ಖಂಡಿತ ಅದು ಲಭಿಸುತ್ತದೆ. ಶ್ರೀರಾಮಕೃಷ್ಣರಲ್ಲಿ ಶರಣಾಗತನಾಗು. ಶ್ರೀರಾಮಕೃಷ್ಣರನ್ನು ಪ್ರಾರ್ಥಿಸು'' ಎಂದರು. ಶಿಷ್ಯ, ''ಅಮ್ಮಾ, ನೀವೇ ನನ್ನ ಪರವಾಗಿ ಅವರ ಬಳಿ ಪ್ರಾರ್ಥಿಸುವಿರಾ?'' ಎಂದು ಕೇಳಲು ಶ್ರೀಮಾತೆಯವರು, ''ಹೌದು, ನಾನು ಹೇಳುತ್ತೇನೆ, ಪ್ರಭು ನನ್ನ ಹುಡುಗನ ಮನಸ್ಸನ್ನು ಶುದ್ಧಗೊಳಿಸು'' ಎಂದು ಕೇಳಿಕೊಳ್ಳುತ್ತೇನೆ'' ಎಂದರು. ಶಿಷ್ಯ,''ಅಮ್ಮಾ, ನೀವು ಹೇಳಿದರೆ ಮಾತ್ರ ನನಗೆ ಅವೆಲ್ಲ ಲಭಿಸೀತು.'' ಎಂದು ಹೇಳುತ್ತಾರೆ.

'ಶ್ರೀಶಾರದಾದೇವೀ ವಚನವೇದ'ದಲ್ಲಿ ಶಿಷ್ಯ ಅದೆಷ್ಟು ಬಾರಿ, ''ಅಮ್ಮ, ನನ್ನ ಮನಸ್ಸು ಶುದ್ಧವಾಗಿರುವಂತೆ ನೋಡಿಕೊಳ್ಳಿ'' ಎಂದು ಹೇಳಿದಾಗ ಶ್ರೀಮಾತೆ, ''ಆಗಲಿ, ಮಗೂ, ಹಾಗೇ ಆಗಲಿ'' ಎಂದು ಭರವಸೆ ನೀಡಬೇಕಾದರೆ ಅವರು ಮನಶ್ಶುದ್ಧಿಯನ್ನು ಅನುಗ್ರಹಿಸಬಲ್ಲ ಯೋಗಪ್ರದಾತೆ ಎಂಬುದು ಸ್ಪಷ್ಟ ವಿದಿತವಾಗುತ್ತದೆ.

ಶ್ರೀಮಾತೆಯವರು ಭಗವನ್ಮಾರ್ಗದಲ್ಲಿ ಗುರಿ ತಲುಪಿಸುವ, ಬ್ರಹ್ಮ ಆತ್ಮ ಏಕತ್ವ ಬೋಧೆಯನ್ನು ನೀಡುವ ಯೋಗಪ್ರದಾತೆ; ಮನಸ್ಸಮತ್ವವನ್ನು ಅನುಗ್ರಹಿಸುವ ಯೋಗಪ್ರದಾತೆ. ಇನ್ನು ಆಧ್ಯಾತ್ಮಿಕ ಜೀವನದ ಕುರಿತಾಗಿ ಅವರು ಹೇಳಿದಂತಹ ಕೆಲ ಕೆಲವು ಮಾತುಗಳು ಸೂತ್ರಪ್ರಾಯವಾಗಿವೆ. ಗಹನವಾದ, ಸುಸೂಕ್ಷ್ಮವಾದ ಆಧ್ಯಾತ್ಮಿಕ ಜಗತ್ತಿನ ಕುರಿತು ನಿಖರವಾಗಿ, ಕ್ಲೃಪ್ತ ವಾಗಿ, ಅಧಿಕಾರವಾಣಿಯಿಂದ ಹೇಳಬೇಕಾದರೆ ಅವರು ಯೋಗಪ್ರದಾತೆಯಾದ, ಅವತಾರಿಣಿಯೇ ಸರಿ. ಉದಾಹರಣೆಗೆ ಶಿಷ್ಯ ಶ್ರೀಮಾತೆಯವರಿಗೆ, ''ಅಮ್ಮ, ಸಾಕ್ಷಾತ್ಕಾರ ಲಭಿಸಿದಾಗ ಏನಾಗುತ್ತದೆ?'' ಎಮದು ಪ್ರಶ್ನಿಸಿದಾಗ ''ಸತ್ ಅಸತ್ ವಿವೇಕ ಜಾಗೃತವಾಗುತ್ತದೆ. ಪ್ರಜ್ಞೆಯ ನೇತ್ರಗಳು ತೆರೆಯುತ್ತವೆ'' ಎಂದು ಎಷ್ಟು ನೇರವಾಗಿ ಉತ್ತರಿಸುತ್ತಾರೆ! ಶಿಷ್ಯ, ''ಅಮ್ಮಾ, ಧ್ಯಾನ ಎಂದರೇನು?'' ಎಂದು ಕೇಳಿದಾಗ, ''ಧ್ಯಾನ ಎಂದರೆ ಭಗವತ್ ಚಿಂತನೆ'' ಎಂದರು. ಶಿಷ್ಯ, ''ಅಮ್ಮ, ಜಪ ತಪಗಳಿಂದ ಇಂದ್ರಿಯಗಳ ರಭಸವನ್ನು ತಡೆಯಬಹುದು.'' ಎನ್ನುತ್ತಾರೆ. ಶ್ರೀಮಾತೆಯವರೇ ಒಂದು ಬಾರಿ, ''ನಾವು ಭಗವಂತನ ಹತ್ತಿರ ಏನೆಂದು ಪ್ರಾರ್ಥಿಸಬೇಕೆಂದು ಹೇಳಿ ನೋಡೋಣ'' ಎಂದು ಕೇಳುತ್ತಾರೆ. ಶಿಷ್ಯರು ''ಜ್ಞಾನಕ್ಕಾಗಿ ಪ್ರಾರ್ಥಿಸಬೇಕು,'' ''ಭಕ್ತಿಗಾಗಿ ಪ್ರಾರ್ಥಿಸಬೇಕು'' ಎಂದು ಕೇಳುತ್ತಾರೆ. ಶಿಷ್ಯರು ''ಜ್ಞಾನಕ್ಕಾಗಿ ಪ್ರಾರ್ಥಿಸಬೇಕು'', ''ಭಕ್ತಿಗಾಗಿ ಪ್ರಾರ್ಥಿಸಬೇಕು'' ಎಂದು ಒಂದೊಂದು ಉತ್ತರ ಹೇಳಿದಾಗ ಶ್ರೀಮಾತೆಯವರಿಗೆ ಯಾವ ಉತ್ತರವೂ ಒಪ್ಪಿಗೆಯಾಗಲಿಲ್ಲ. ಅವರು, ''ನನ್ನನ್ನು ಕೇಳುವುದಾದರೆ ಮನಸ್ಸನ್ನು ನಿರ್ವಾಸನೆಗೊಳಿಸು ಎಂದು ಭಗವಂತನ ಹತ್ತಿರ ಪ್ರಾರ್ಥಿಸಿಕೊಳ್ಳಬೇಕು'' ಎನ್ನುತ್ತಾರೆ. ಭಗವತ್ ಸಾಕ್ಷಾತ್ಕಾರಕ್ಕೆ ಈಗ ನಮಗೆ ಅಡ್ಡಿಯಾಗಿರುವುದು ವಾಸನೆಗಳು, ಅತ್ಯಂತ ಕ್ಲೇಶಕರವಾದ, ಭಯಂಕರವಾದ ಜನ್ಮ ಮರಣಸಂಸಾರ ಚಕ್ರಕ್ಕೆ ಕಾರಣವೂ ವಾಸನೆಗಳೇ. ಅದ್ದರಿಂದ ಮನಸ್ಸನ್ನು ನಿರ್ವಾಸನೆಗೊಳಿಸುವುದೇ ಅತ್ಯಂತ ಆವಶ್ಯಕವಾಗಿ ಆಗಬೇಕಾದ್ದು. ಶ್ರೀಮಾತೆಯವರು ನೀಡಿದ ಈ ನಾಲ್ಕೂ ಉತ್ತರಗಳನ್ನು ನಾವು ಮನನ, ಧ್ಯಾನದ ಮೂಲಕ ನಮ್ಮದಾಗಿಸಿಕೊಳ್ಳಬೇಕು.

ಆದ್ದರಿಂದ ಶ್ರೀಮಾತೆಯವರ ಪದತಲದಲ್ಲಿ ಭಕ್ತಿಯಿಂದ ಪ್ರಾರ್ಥಿಸೋಣ.

**''ತವ ಕೃಪೆ ಬೆಳಗಲಿ ಭವ ಭ್ರಮೆ ಕಳೆಯಲಿ ।**
**ಶಿವೆ ಶ್ರೀಶಾರದೆ ತವಕದಿ ಮೊರೆಯುವೆ ।।''**

---

೬ You will be a Paramahamsa, Swami Sarvgatananda, ಪು. ೫೪